## ಭಾಷಣ

ರಾಷ್ಟ್ರ ನಿರ್ಮಾಣ ಮಾಡುವುದು ಹೇಗೆ ಎಂದು ಒಬ್ಬ ಸಾವಿರಾರು ಜನರ ಮುಂದೆ ಭಾಷಣ ಬಿಗಿಯುತ್ತಿದ್ದ. ಇದ್ಯಾವುದರ ಪರಿವೆಯೇ ಇಲ್ಲದ ಕಾರ್ಮಿಕರು ನಿರ್ಮಾಣ ಕಾರ್ಯದಲ್ಲಿ ಮಗ್ನರಾಗಿದ್ದರು.

★★★

## ದೇವರಿಗೆ ಹೇಳುತ್ತೇನೆ...

ಸಿರಿಯಾದಲ್ಲಿ ಉಗ್ರರ ಗುಂಡಿಗೆ ತುತ್ತಾದ ಪುಟ್ಟ ಬಾಲಕನೊಬ್ಬ ಸಾಯುವ ಮುನ್ನ ಹೇಳಿದ ಮಾತು ಮನಕಲಕುವಂತಿತ್ತು. ಅವನು ಹೇಳಿದ್ದೇನೆಂದರೆ, 'ನಾನು ಮೇಲೆ ಹೋದ ಮೇಲೆ ದೇವರಿಗೆ ಇದನ್ನೆಲ್ಲಾ ಹೇಳುತ್ತೇನೆ'.

★★★

## ನೆನಪು

ಗುಡುಗು ಸಿಡಿಲು ಬಂದಾಗ ನಿನ್ನ ನೆನಪಾಗುತ್ತದೆ, ಜೋರು ಮಳೆ ಬಂದಾಗ ನಿನ್ನ ನೆನಪಾಗುತ್ತದೆ. ಯಾಕೆಂದರೆ...

'ಮಾರಾಯ, ಮೊನ್ನೆ ನೀನು ತೆಗೆದುಕೊಂಡು ಹೋಗಿದ್ದ ನನ್ನ ಛತ್ರಿಯನ್ನು ಬೇಗ ವಾಪಸ್ಸು ಕೊಡು.'



## ನಮಸ್ಕಾರ

ಒಮ್ಮೆ ದೇವರು ಮತ್ತು ಮನುಷ್ಯ ಮುಖಾಮುಖಿಯಾದರು.ಇಬ್ಬರೂ ಒಂದೇ ಸಮಯದಲ್ಲಿ ಪರಸ್ಪರ ಈ ರೀತಿ ವಂದಿಸಿದರು.

'ನನ್ನ ಸೃಷ್ಟಿಕರ್ತನಾದ ನಿನಗೆ ನಮಸ್ಕಾರಗಳು.'

**ಹನಮಂತ ಕೊಪ್ಪದ**
ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಮೊದಲ ವರ್ಷದ ಪತ್ರಿಕೋದ್ಯಮ ಎಂ.ಎ. ಓದುತ್ತಿರುವ ಹನಮಂತ ವಿಜಯಪುರದವರು. ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾಗಿವೆ.